ಶ್ರೀ ಬಿ. ಎಂ. ಪಾಟೀಲ್. —ಕೆಲಸವನ್ನು ಕೊಡತಕ್ಕ ಕಾಲಕ್ಕೆ ಪಿ. ಡಬ್ಯು. ಡಿ. ಅವರು ಯಾವ್ಯಾವ ನೇಮಗಳನ್ನು ಸ್ಟಿಪುಲೇಟ್ ಮಾಡಿದ್ದರೋ ಆ ಪ್ರಕಾರ ಅವರು ಕ್ರಮ ಕೈಗೊಳ್ಳಲಿಕ್ಕೆ ಮಾತ್ರ ಬರುತ್ತದೆ.

FAILURE OF JOWAR CROPS

297. Sri S R. BOMMAI (Kundgol).—

Will the Minister for Agriculture be pleased to state :—

(*a*) whether it has come to the notice of Government that there is complete failure of Jowar Crop in Dharwar District due to the disease of (ಬೆಂಕಿ ಹುಳ) pests, if so, the total loss suffered ;

(*b*) whether Government has found out if the disease is due to growing of Hybrid Jowar or due to any other reason ;

(*c*) the remedies that have been thought by the Agricultural Department to prevent recurnrece of this disease which has affected adversely the agriculturists of these areas ;

(*d*) whether the Government has any proposal before it to give any financial aid to compensate these wholesale and large scale loss suffered by the agriculturists of this district ?

Sri B. RACHAIAH (Minister for Agriculture) :—

(*a*) No.

(*b*) Cannot be attributed to growing of Hybrid Jowar only.

(*c*) The Department has been recommending dusting of Jowar earheads with insecticides to prevent damage.

(*d*) Does not arise.

ಶ್ರೀ ಎಸ್.ಆರ್. ಬೊಮ್ಮೈ.—(ಅ) ಗೆ ಉತ್ತರವಾಗಿ ಅದು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ ಮತ್ತೆ ಅದೇ ರೀತಿ (ಆ) ಉತ್ತರವಾಗಿ ಉತ್ತಮ ತಳಿಯ ಜೋಳವನ್ನು ಬೆಳೆಯುವುದರಿಂದಲೇ ಈ ರೋಗ ಕಾಣಿಸಿಕೊಂಡಿದೆ ಎಂದು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ. ಇದರಿಂದಾಗಿ ಧಾರವಾಡ ೧೪ ತಾಲ್ಲೂಕುಗಳಲ್ಲಿ ಸಾಮಾನ್ಯವಾಗಿ ಒಂದು ಕೋಟಿ ರೂಪಾಯಿಗೂ ಮಿಕ್ಕಿ ನಷ್ಟವಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿಯೇ ?

ಶ್ರೀ ಬಿ. ರಾಚಯ್ಯ.—ಸ್ವಾಮಿ ಮಾನ್ಯ ಸದಸ್ಯರು ಪೂರ್ತಿಯಾಗಿ ನಷ್ಟವಾಗಿದೆಯೇ ಎಂದು ಕೇಳಿದ್ದಾರೆ ಅದಕ್ಕೆ ಇಲ್ಲವೆಂದು ಹೇಳಿದೆ. ಬೆಂಕಿಹುಳ ರೋಗದಿಂದ ಅಲ್ಲಲ್ಲಿ ಸ್ವಲ್ಪ ನಷ್ಟವಾಗಿದೆಯೇ ಹೊರತು ಪೂರ್ತಿಯಾಗಿ ನಷ್ಟವಾಗಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಸ್ವಾಮಿ, ಈ ಬೆಂಕಿ ಹುಳು ರೋಗದಿಂದ ಎಷ್ಟು ಎಕರೆ ಜಮೀನಿಗೆ ನಷ್ಟವಾಗಿದೆ ಮತ್ತು ಅವುಗಳ ನಿವಾರಣೆಗಾಗಿ ಮುಂಜಾಗರೂಕತೆ ಕ್ರಮಗಳನ್ನು ಏನು ಕೈಗೊಂಡಿದ್ದೀರಿ?

ಶ್ರೀ ಬಿ. ರಾಚಯ್ಯ —ನಾಲ್ಕು ತಾಲ್ಲೂಕುಗಳಲ್ಲಿ ಸಣ್ಣ ಸಣ್ಣ ಭಾಗಗಳಲ್ಲಿ ಸುಮಾರು ೫ ಸಾವಿರ ಎಕರೆಗೆ ಬೆಂಕಿ ಹುಳ ರೋಗ ತಗುಲಿದೆ. ಏತಕ್ಕೆಂದರೆ ಮಳೆ ಸಕಾಲದಲ್ಲಿ ಬಾರದೆ ಲಾಂಗ್‌ಡ್ಯೂರೇಷನ್ ಮೇಲೆ ಬಂದಿದ್ದರಿಂದ ಆಮೇಲೆ ಜೋಳವನ್ನು ಬಿತ್ತಿದರು. ಆಕ್ಟೋಬರ್‌ನಲ್ಲಿ ತೆನೆ ಬಂದಾಗ ಈ ರೋಗ ಬಂದಿತ್ತು. ಆಗ ಡಿಸೀಸ್‌ಗೆ ಔಷಧಿಯನ್ನು ಹೊಡೆಸಬೇಕಾಗಿತ್ತು. ಆಗ ಇಲಾಖಾಧಿಕಾರಿಗಳು ಇನ್‌ಸ್ಪೆಕ್ಟ್ ಮಾಡಿದಾಗ ಡಿಸೀಸ್ ಪಡೆ ಪೆಸ್ಟ್ಸ್‌ಗೆ ಔಷಧಿ ಹೆಚ್ಚು ಹೊಡೆಸಲು ರೈತರು ಮುಂದೆ ಬರ ಬೇಕಾಗಿತ್ತು. ರೈತರು ಈ ಕೆಲಸವನ್ನು ಮಾಡಿಸುವುದಕ್ಕೆ ಮುಂದೆ ಬರಲಿಲ್ಲ. ಆದುದರಿಂದ ಆ ಏರಿಯಾ ದಲ್ಲಿ ಸ್ಪ್ರೇ ಮಾಡುವುದಕ್ಕಾಗಲಿಲ್ಲ ಎಂದು ವರದಿ ಕೊಟ್ಟಿದ್ದಾರೆ.

ಶ್ರೀ ಎಸ್.ವಿ. ಅಗ್ನಿಹೋತ್ರಿ.—ಸ್ವಾಮಿ, ಮಾನ್ಯ ಸದಸ್ಯರು ೧೦೦ಕ್ಕೆ ೧೦೦ ರಷ್ಟು ನಷ್ಟ ವಾಗಿದ್ದರೂ ಕೂಡ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಎಂಬುದಾಗಿ ಹೇಳಿದರು. ಹಾಗಾದರೆ ಎಷ್ಟು ಲಾಸ್ ಆದ ನಂತರ ತಮ್ಮ ತಿಳುವಳಿಕೆಗೆ ಬರುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ,—ಇದರಲ್ಲಿ ೧ ಲಕ್ಷ ೨ ಸಾವಿರ ಎಕರೆಯಲ್ಲಿ ಹೈಬ್ರೀಡ್ ಜೋಳ ಬೆಳೆ ಆಗಿದೆ. ಮತ್ತು ಏರಿಯಲ್ ಸ್ಪ್ರೇ ಏನು ಇದೆಯೋ ಅದನ್ನೂ ಮಾಡಿದ್ದೇವೆ. ಕೆಲವು ಭಾಗದಲ್ಲಿ ಹಳೆಯ ಜೋಳ ಏನು ಬಿತ್ತಿದ್ದರೋ ಅದಕ್ಕೆ ಪೀಚು ಬಂದ ಕಾಲದಲ್ಲಿ ಮಳೆ ಸರಿಯಾಗಿ ಆಗದೇ ಇದ್ದುದರಿಂದ ಸ್ವಲ್ಪ ನಷ್ಟವಾಗಿದೆಯೋ ಹೊರತು ಪೂರ್ತಿ ನಷ್ಟವಾಗಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಹೈಬ್ರಿಡ್ ಜೋಳ ಬಿತ್ತಿದ್ದ ಭಾಗದಲ್ಲಿ ಬೆಂಕಿಹುಳ ರೋಗ ಬಿದ್ದಿಲ್ಲ. ಹಳೆಯ ಜೋಳ ಯಾವ ಭಾಗದಲ್ಲಿ ಬಿತ್ತಿದ್ದರೋ ಆ ಭಾಗದಲ್ಲಿ ಈ ಬೆಂಕಿಹುಳ ರೋಗ ಬಿದ್ದಿದೆ ಎಂದು ಹೇಳಿದಿರಿ. ಇದರ ಬಗ್ಗೆ ಮುಂಗಡವಾಗಿ ಕ್ರಮ ತೆಗೆದುಕೊಂಡಿದ್ದರೆ ಬೆಳೆ ಬರುತ್ತಿತ್ತು. ಹೋದ ವರ್ಷ ಎಷ್ಟು ಜೋಳ ಪ್ರೊಡಕ್ಷನ್ ಆಗಿತ್ತು, ಈ ವರ್ಷ ಎಷ್ಟು ಪ್ರೊಡಕ್ಷನ್ ಆಗಿತ್ತು, ಇದರಿಂದ ಎಷ್ಟು ನಷ್ಟವಾಗಿದೆ ಎನ್ನವ ಅಂಕಿ ಸಂಖ್ಯೆಗಳನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕೇಳಿದ್ದೇವೆ. ಅವರು ಇನ್ನೂ ನಮಗೆ ಒದಗಿಸಿಕೊಟ್ಟಿಲ್ಲ.

ಶ್ರೀ ಆರ್. ಜಿ. ವಾಲಿ.—ಸ್ವಾಮಿ, ಈ ರೀತಿ ಜೋಳಕ್ಕೆ ಬೆಂಕಿಹುಳ ರೋಗ ಕಳೆದ ವರ್ಷವೇ ಬಂದಿದೆ. ಇದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಆದುದರಿಂದ ಇನ್ನು ಮುಂದಾದರೂ ಈ ರೀತಿ ಬರುವ ಸಂದರ್ಭ ಒದಗಿದರೆ ಸರ್ಕಾರದವರು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ —೧೯೬೪-೬೫ರಲ್ಲಿ ಏರಿಯಲ್ ಸ್ಪ್ರೇ ಮಾಡುವುದಕೋಸ್ಕರ ಏನು ದುಡ್ಡು ಖರ್ಚು ಮಾಡಿದ್ದೆವೋ ಅದನ್ನು ರೈತರು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಅನಂತರ ಆ ಖರ್ಚನ್ನು ವಜಾ ಮಾಡಿದ್ದೇವೆ. ಹತ್ತಾರು ತಾಲ್ಲೂಕಿನಲ್ಲಿ ಈ ರೀತಿ ಮಾಡಿದಾ ರೆ. ಈ ರೀತಿಯಾಗಿ ಕೆಲಸ ಮಾಡಿಸಿಕೊಂಡ ಮೇಲೆ ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ರೈತರು ಹಿಂಜರಿಯುತ್ತಾರೆ.

ಶ್ರೀ ಎನ್. ಎ. ಚನ್ನೇಗೌಡ —ಈ ರೀತಿ ೫ ಸಾವಿರ ಎಕರೆಗೆ ಬೆಂಕಿಹುಳ ಬಿದ್ದು ಬೆಳೆ ನಷ್ಟವಾಯಿತು ಅಂದ ಮೇಲೆ ಪೆಸ್ಟ್ ಕಂಟ್ರೋಲ್ ಆಕ್ಟ್ ಪ್ರಕಾರ ಮುಂಚೆಯೇ ಅದರ ಮೇಲೆ ಕ್ರಮ ತೆಗೆದುಕೊಂಡು ಔಷಧಿಯನ್ನು ಹೊಡೆಸಿ ಅನಂತರ ಅದಕ್ಕೆ ಖರ್ಚು ಮಾಡಿದ ಹಣವನ್ನು ಅವರಿಂದ ವಸೂಲ್ ಮಾಡಬಹು ದಾಗಿತ್ತಲ್ಲವೇ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ರೈತರೂ ಕೂಡ ಒಪ್ಪಿಗೆ ಕೊಡಬೇಕು ೨೩-೧೦-೧೯೬೯ ರಲ್ಲಿ ಡೆವಲಪ್‌ಮೆಂಟ್ ಕೌನ್ಸಿಲ್ ಅಧಿಕಾರಿಗಳು ಮೀಟಿಂಗ್ ಮಾಡಿ ಅವರ ಒಪ್ಪಿಗೆಯನ್ನು ಕೇಳಿದಾಗ ಈ ರೀತಿ ಹಣವನ್ನು ಮುಂಗಡವಾಗಿ ಕೊಡಬೇಕು ಎನ್ನುವುದಕ್ಕೆ ಅವರು ತಮ್ಮ ಒಪ್ಪಿಗೆಯನ್ನು ಕೊಡಲಿಲ್ಲ.

ಶ್ರೀ ಆರ್. ಜಿ. ವಾಲಿ.—ಈ ಬೆಂಕಿಹುಳ ರೋಗ ಯಾವ ಯಾವ ಜಿಲ್ಲೆಗೆ ಯಾವ ಯಾವ ತಾಲ್ಲೂಕಿಗೆ ಹರಡಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದು ರಾಜ್ಯಾದ್ಯಂತ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾ ಇದೆ. ಇದು ಕಡಿಮೆ ಪ್ರಮಾಣದಲ್ಲಿ ಬಿದ್ದಿದೆ. ಇದರ ಬಗ್ಗೆ ಯಾರು ಯಾರು ಇಲಾಖಾ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೋ ಅಲ್ಲಿ ಇದನ್ನು ತಡೆಗಟ್ಟುವುದಕ್ಕೆ ತಕ್ಕ ಕ್ರಮವನ್ನು ಕೈಗೊಳ್ಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮೈ.—ಧಾರವಾಡ ಜಿಲ್ಲೆಯಲ್ಲಿ ಮುಂದೆ ಏನಾದರೂ ಈ ರೀತಿ ಜೋಳದ ಬೆಳೆಗೆ ಬೆಂಕಿಹುಳ ರೋಗ ಬಿದ್ದರೆ ವಿಮಾನದ ಮೂಲಕ ಕ್ರಿಮಿನಾಶಕ ಔಷಧಿಗಳನ್ನು ಸಿಂಪಡಿಸುವುದಕ್ಕೆ ರೈತರು ಮುಂಗಡವಾಗಿ ಹಣ ಏನಾದರೂ ತುಂಬಿದರೆ ಅದನ್ನು ಪ್ರಿವೆಂಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ರೀತಿಯಾಗಿ ರೈತರು ತಮ್ಮ ಭಾಗದ ಹಣವನ್ನು ಮುಂಗಡವಾಗಿ ತುಂಬಿದರೆ ಪ್ರಯತ್ನ ಮಾಡುತ್ತೇವೆ.

SRI N. B. SIRDESAI.—When Government takes the responsibility of preventing the diseases like cholera, plague etc., why not they also take the responsibility of preventing this disease which causes large scale destruction of food crops ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಪೂರ್ಣವಾಗಿ ಸರ್ಕಾರದವರೇ ಹೊಣೆಗಾರರು ಎಂದು ಹೇಳುವುದ ಕ್ಕಾಗುವುದಿಲ್ಲ. ಈ ಕಾಯಿಲೆಗೆ ರೈತರೂ ಕೂಡ ಜವಾಬ್ದಾರಿ ಹೊತ್ತರೆ ಈ ಕೆಲಸ ಮಾಡುವುದಕ್ಕೆ ಸಾಧ್ಯ.

DISPUTES ABOUT WAGES FOR ADJUDICATION

347. SRI M. S. KRISHNAN (Malleswaram).—

Will the Minister for Law, Labour and Parliamentary Affairs be pleased to state:—

(*a*) whether the Government has issued endorsements to the Trade Unions in Textile Industry that they would not refer disputes pertaining to wages, etc., for adjudication on the ground that the question relating to wages, etc., are pending before the Wage Board or the decision of the Wage Board has already been given ;

(*b*) whether this is in pursuance of any decision taken by the Government and whether it would apply to the entire industry ;

(*c*) whether recently, a reference to adjudication in respect of D.A. has been made by the Government in the case of workers of Minerva Mills Ltd., Bangalore ?

SRI K. PUTTASWAMY (Minister for Law, Labour and Parliamentary Affairs).—

(*a*) Yes.

(*b*) Yes ; the view was taken by the Government not to refer any dispute regarding its structure and alied matters when a Central Wage Board was considering the same question for that industry.

(*c*) Yes.